# 7

# ನಂಬಿಕೆಯ ಒಪ್ಪಂದ

ಬೈಬಲ್ ಹೇಳುವದನ್ನು ಸರಿಯಾಗಿ ತಿಳಿಯದೆ ಇರುವದರಿಂದ, ಆರಾಧನೆಯ ಕುರಿತಾದ ವಾಗ್ವಾದಗಳು ಉಂಟಾಗುತ್ತದೆ. ನಿಜವಾಗಿಯೂ ಕ್ರೈಸ್ತರೆನಿಸಿಕೊಳ್ಳುವವರು, ದೇವರ ವಾಕ್ಯವನ್ನು ಅಧಿಕಾರ ಯುಕ್ತ ಎಂಬುದಾಗಿ ನಂಬುವದಿಲ್ಲ, ಹೇಗೂ ವಾಕ್ಯಕ್ಕೆ ವಿದೇಯರಾ ಗಿರುವವರೂ ಸಹ, ಇತರೆ ಯಥಾರ್ಥವಾಗಿರುವವ ಸಂಗಡ ಸಮ್ಮತಿಸುವದಿಲ್ಲ.

ಒಂದು ವೇಳೆ ಎರಡೂ ಗುಂಪಿನವರು ಬೈಬಲ್ ಹೇಳುವದನ್ನೆ ಯಥಾರ್ಥವಾಗಿ ಮಾಡುವುದಾದರೆ ಭಿನ್ನಾಭಿಪ್ರಾಯ ಯಾಕೆ ಉಂಟಾಗುತ್ತದೆ? ಮೊದಲನೆಯದಾಗಿ, ವಿವಿಧ ಹಿನ್ನೆಲೆ ಹಾಗು ಅನುಭವವಿರುವ ಜನರು ವಾಕ್ಯವನ್ನು ಅಧ್ಯಯನ ಮಾಡಲು ಬರುತ್ತಾರೆ ಎರಡನೆಯದಾಗಿ, ವಿಶ್ವಾಸಿಗಳು ವಿವಿಧವಾದ ಆತ್ಮಿಕತೆಯ ಹಂತದಲ್ಲಿರುತ್ತಾರೆ ಮತ್ತು ವಿವಿಧವಾದ ತಿಳುವಳಿಕೆಯಿಂದಲೂ ಮತ್ತು ಅಭಿವೃದ್ಧಿಯಂದಲೂ ಇರುತ್ತಾರೆ. ಪರಿಪಕ್ವತೆಯ ಮತ್ತು ಹಿನ್ನೆಲೆಯ ವ್ಯತ್ಯಾಸಗಳು ಬೈಬಲನ್ನು ಸಾಮಾನ್ಯವಾಗಿ ಅರ್ಥಮಾಡುವದಕ್ಕೆ ಸವಾಲಾಗಿರುತ್ತದೆ. ಹಾಗಾದರೆ ನಾವು ಸತ್ಯವನ್ನು ಅರಿಯಲು ಸಾಧ್ಯವಿಲ್ಲ ಎಂಬ ಅರ್ಥವಲ್ಲ (ಯೋಹಾನ 8:32; 17:17; 1 ತಿಮೋಥೆ 2:3, 4). ಪ್ರತಿ ವಿಷಯವು ಸರಿಯಾಗಿದೆ ಅಥವಾ ದೇವರಿಂದ ನಾವು ತಿಳಿಯುವಂತ ವಿಷಯಗಳು ಗೊಂದಲಮಯವಾಗಿದೆ ಎಂಬ ಅರ್ಥವು ಅಲ್ಲ (1 ಕೊರಿಂಥ 14:33). ವಿವಿಧವಾದ ದೃಷ್ಟಿಕೋನವು ಸತ್ಯವನ್ನು ಅರಿಯಲು ಅಡಚಣೆಯಾಗಿರಬಹುದು.

## ಒಮ್ಮತದ ಅಭಿಪ್ರಾಯದೆಡೆಗೆ


ದೇವರ ವಾಕ್ಯವನ್ನು ಅಭ್ಯಾಸಿಸುವದರಲ್ಲಿ "ಒಂದೇ ಮನಸ್ಸು ... ಒಂದೇ ಅಭಿಪ್ರಾಯವು ಇರಬೇಕು" (1 ಕೊರಿಂಥ 1:10ಬಿ). ಅದನ್ನೆ ನಾವು ಮಾಡಬೇಕು. ಜನರು ಯಾವಾಗಲೂ ಭಿನ್ನಾಭಿಪ್ರಾಯ ಹೊಂದಿರುವದರಿಂದ, ಒಂದ ನಿಜವಾದ ಗುರಿಯನ್ನು ಬಯಸಬಹುದೇ? ಕೊರಿಂಥ ಸಭೆಯಲ್ಲಿದ್ದ ವಿಭಜನೆಯ ಕುರಿತಾಗಿ ಪೌಲನು ಉತ್ತರವನ್ನು ನೀಡುತ್ತಾನೆ.

1 ಕೊರಿಂಥ 1:10ರಲ್ಲಿ ಅದನ್ನು ಕಂಡು ಹಿಡಿಯುವ ಪ್ರತಿಕ್ರಿಯೆಯನ್ನು ಮಾಡಿದ್ದಾನೆ, ಮತ್ತು ಕ್ರೂಜೆಯ ಮರಣ ಹಾಗೂ ದೀಕ್ಷಾಸ್ನಾನದ ಕುರಿತು ಕೊರಿಂಥದವರಿಗೆ ಸವಾನ್ನು ನೀಡಿದ್ದಾನೆ. ಕೊರಿಂಥದಲ್ಲಿದ್ದ ಗಂಭೀರವಾದ ಭಿನ್ನಾಭಿಪ್ರಾಯದ ಕುರಿತು ಪೌಲನಿಗಿದ್ದಂಥ ದೃಷ್ಟಿಕೋನ ವನ್ನು ನೋಡೋಣ:

> ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದ ಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕಂದರೆ ನನ್ನಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದುಬಂತು. ನಿಮ್ಮೊಳಗೆ ಪ್ರತಿಯೊಬ್ಬನು - ನಾನು ಪೌಲನವನು, ಇಲ್ಲವೆ - ನಾನು ಅಪೊಲ್ಲೋಸನವನು, ಅಥವಾ - ನಾನು ಕೇಫನವನು, ಇಲ್ಲವೆ - ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನಂತೆ (ವಚನಗಳು 10-13).

ಮಾನವನ ಜ್ಞಾನವನ್ನು ನಿರಕರಿಸಬೇಕೆಂದು ಪೌಲನು ಕೊರಿಂಥದವರಿಗೆ ತಿಳಿಸಿದನು (1 ಕೊರಿಂಥ 1:18-31) ಮತ್ತು ಕ್ರಿಸ್ತನ ಶಿಲುಬೆಯಲ್ಲಿ ದೊರಕುವ ಜ್ಞಾನದ ಕಡೆಗೆ ತಿರುಗಿಕೊಳ್ಳ

ಬೇಕೆಂದು ಹೇಳಿದನು (2:1-5). ಇದನ್ನು ದೇವರು ಆತ್ಮನು ಪೌಲನಿಗೂ ಮತ್ತು ತಾನು ಆಯ್ಕೆ ಮಾಡಿಕೊಂಡವರಿಗೂ ನೀಡಿರುವದರಿಂದ (2:6-13) ಅವರು ಈ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ ಎಂದು ಹೇಳಿದನು. "ಕ್ರಿಸ್ತನ ಮನಸ್ಸನ್ನು" ಹೊಂದಿಕೊಳ್ಳುವಂತೆ ಕೊರಿಂಥದವರಿಗೆ ಮನವಿಮಾಡಿದನು (2:16ಬಿ). ಪೌಲನ ಆಲೋಚನೆಯಲ್ಲಿದ್ದ ದೃಷ್ಟಾಂತವನ್ನು ಈ ರೇಖಾ ಚಿತ್ರದಿಂದ ಅರ್ಥಮಾಡಿಕೊಳ್ಳೋಣ:




ಎ, ಎಂಬ ವಿಶ್ವಾಸಿ ಮತ್ತು ಬಿ, ಎಂಬ ವಿಶ್ವಾಸಿ ತ್ರಿಕೋನದ ಕೆಳಭಾಗದಲ್ಲಿ ಎದುರು ಬದರಾಗಿದ್ದಾರೆ, ಅವರು ಕೆಲವು ಪ್ರಶ್ನೆಗಳಿಗೆ ತದ್ವಿರುದ್ಧವಾಗಿದ್ದಾರೆ ಎಂದು ತಿಳಿಯಬಹುದು. ಅವರು ತಮ್ಮ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು ಒಂದು ಸಮ್ಮತಕ್ಕೆ ಬರುವ ವಿಧವಿಧ ಅವಕಾಶಗಳಿವೆ. (1) ಅವರು ತಮ್ಮ ಎರಡು ಮೂಲೆಗಳನ್ನು ಬಿಟ್ಟು, ಮಧ್ಯಭಾಗಕ್ಕೆ ಬಂದು ಹೊಂದಾಣಿಕೆ ಮಾಡಿಕೊಳ್ಳಬಹುದು. (2) ಎ, ಯನ್ನು "ಬಿ" ಒಪ್ಪಿಸಿ "ಬಿ" ಯನ್ನು "ಎ" ಬಳಿಗೆ ಕರೆತರಬಹುದು. (3) "ಬಿ" ಸಹ ಇದನ್ನು ಮಾಡುವ ಮೂಲಕ ಕಾರ್ಯಸಾಧಿಸಬಹುದು. ಒಂದು ಸಹಮತಕ್ಕೆ ಬರಬೇಕಾದರೆ, ದೇವರ ವಾಕ್ಯದ ಮೂಲಕ ಒಪ್ಪಂದಕ್ಕೆ ಬರಬಹುದು. ಅವರು ಸತ್ಯದ ಮೂಲಕ ಒಂದಾಗಬಹುದೆಂಬ ಇನ್ನೊಂದು ಅರ್ಥ ಅವರು ಈ ಕಾರ್ಯವನ್ನು ಮಾಡುವತನಕ ಐಕಮತ್ಯ ಉಂಟಾಗದು.

ಯೋಹಾನ 17ರಲ್ಲಿ, ಶಿಷ್ಯರು ಐಕಮತ್ಯದಲ್ಲಿರಬೇಕೆಂದು ಯೇಸು ಪ್ರಾರ್ಥಿಸಿದನು:

> ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ *ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ* ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ (ವಚನಗಳು 20, 21; ಒತ್ತಿ ಹೇಳಿದ್ದು ನನ್ನದು).

ಸತ್ಯದಿಂದ, ಒಂದಾಗುವುದು ಹೇಗೆ ಸಾಧ್ಯ? ಮೊದಲ ಕೊರಿಂಥ 1 ಮತ್ತು 2ರಲ್ಲಿ ಇದಕ್ಕೆ ಒಂದು ಮಾರ್ಗವನ್ನು ಸೂಚಿಸಲಾಗಿದೆ: ಪ್ರತಿ ವಿಶ್ವಾಸಿಯು ಸಾಧ್ಯ ವಾದಷ್ಟು ಯೇಸುವಿಗೆ ಹತ್ತಿರವಾಗಿರಬೇಕು, ಅಥವಾ ಪೌಲನ ಹೇಳಿಕೆಯಂತೆ. "ಕ್ರಿಸ್ತನ ಮನಸ್ಸನ್ನು" ಹೊಂದಿರಬೇಕು (2:16ಬಿ). ಯೇಸುವಿಗೆ ಹತ್ತಿರವಾಗಿರುವ ಸಹೋದರ ಸಹೋದರಿಯರು, ಪರಸ್ಪರ ಹತ್ತಿರವಾಗಿರುತ್ತಾರೆ. ಇಬ್ಬರು ವ್ಯಕ್ತಿಗತವಾಗಿ ಕ್ರಿಸ್ತನ ಮನಸ್ಸನ್ನು ಹೊಂದಿದ್ದರೆ, ಅವರು ಒಂದಾಗಿ ಮತ್ತು ದೇವರ ವಾಕ್ಯದಲ್ಲಿ ನೆಲೆಗೊಂಡಿರುವರು.

ವಾದ್ಯಗಳ ಸಹಿತವಾಗಿ ದೇವರನ್ನು ಆರಾಧಿಸಬೇಕು ಎಂದು ಹೇಳುವ ಸಭೆಯವರು, ವಾದ್ಯ ರಹಿತವಾದ ದೇವರ ಆರಾಧನೆ ಎಂದು ಹೇಳುವವರಿಂದ, ಪ್ರತ್ಯೇಕವಾಗಿದ್ದಾರೆ. ಈ ಎರಡು ಸ್ಥಿತಿಗಳು ವ್ಯತಿರಿಕ್ತವಾಗಿರುವದರಿಂದ, ಅವರಿಬ್ಬರು ಸರಿಯಲ್ಲ ಎಂದು ನಿರ್ಣಯಿಸುತ್ತೇವೆ. ನಂತರ, ನಾವು ಏನು ಮಾಡಬೇಕು, ಈ ವಿಷಯಕ್ಕೆ, "ಕ್ರಿಸ್ತನ ಮನಸ್ಸನ್ನು" ಪಡೆದುಕೊಳ್ಳಬೇಕು (2:16ಬಿ). ನಂತರ ನಾವು ಒಂದಾಗಲು, ಸಾಧ್ಯವಾಗುತ್ತದೆ. ಈ ಪಾಠವು ಮತ್ತು ಎರಡನೆಯ ಪಾಠವು ಪ್ರಶ್ನೆಗಳಿಗೆ, "ಕ್ರಿಸ್ತನ ಮನಸ್ಸನ್ನು" ಪಡೆದುಕೊಳ್ಳಬೇಕು. ನಂತರ ನಾವು ಒಂದಾಗಲು, ಸಾಧ್ಯ ವಾಗುತ್ತದೆ. ಈ ಪಾವು ಮತ್ತು ಎರಡನೆಯ ಪಾಠವು ಪ್ರಶ್ನೆಗಳಿಗೆ, ಕ್ರಿಸ್ತನ ಮನಸ್ಸನ್ನು ಹೊಂದಿಕೊಳ್ಳುವ ಕುರಿತಾಗಿರುತ್ತದೆ.

## ಪ್ರಾಥಮಿಕ ಆರಂಭ

ಇಬ್ರಿಯ 11:6; ಬೈಬಲಿನ ಮೂಲಭೂತ ಬೋಧನೆಯಾಗಿರುತ್ತದೆ. "ನಂಬಿಕೆ ಇಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ, ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ." ದೇವರಿಗಾಗಿ ಬದುಕುವುದು ಎಂದರೆ ನಂಬಿಕೆಯಿಂದ ನಡೆಯುವದು ಅಥವಾ ಬದುಕುವುದು ಎಂಬ ಅರ್ಥ (2 ಕೊರಿಂಥ 5:7). ಬೈಬಲಿನಲ್ಲಿ ಈ ಸತ್ಯವನ್ನು ನೋಡುತ್ತೇವೆ. ಉದಾಹರಣೆಗೆ, ಅಬ್ರಹಾಮನು ನಂಬಿಕೆಯಿಂದ ದೇವರ ಆಶೀರ್ವಾದವನ್ನು ಪಡೆದನು (ಆದಿಕಾಂಡ 15:6; ರೋಮಾಪುರ 4:9; ಯಕೋಬ 2:23 ನೋಡಿ). ಆಶೀರ್ವಾದಕ್ಕಾಗಿ ನಂಬಿಕೆಯಿಂದ ಜೀವಿಸಬೇಕು ಎಂದು ಪ್ರವಾದಿಗಳು ಇಸ್ರಾಯೇಲ್ಯರಿಗೆ ತಿಳಿಸಿದರು (ಹಬಕ್ಕೂಕ್ಕ 2:4ಬಿ; ರೋಮಾಪುರ 1:7 ನೋಡಿ). ಕೃಪೆಯಿಂದಲೇ ರಕ್ಷಣೆ ಎಂದು ಪೌಲನು ಉಪದೇಶಿಸಿದನು ಅದು ನಂಬಿಕೆಯಿಂದ ಉಂಟಾಗುವ ಕೃಪೆ (ಎಫೆಸ 2:8, 9). ಆದುದರಿಂದ ನಂಬಿಕೆಯಿಂದಲೇ ಒಬ್ಬನು ಬದುಕುವನು ಎಂದು ಇಬ್ರಿಯ ಬರಹಗಾರನು ತಿಳಿಸಿದನು - ನಂಬಿಕೆಯಿಂದ ಬದುಕುವುದು ಅಂದರೆ ಏನು? ನಾವು ನಂಬಿಕೆಯಿಂದ ಜೀವಿಸುತ್ತಿರುವೆವೋ, ಅಥವಾ ಇಲ್ಲವೋ ಎಂದು ಹೇಗೆ ಹೇಳೋಣ? ಬೈಬಲಿನ ಉತ್ತರವನ್ನು ಪಡೆಯುವದಕ್ಕೆ "ಕ್ರಿಸ್ತನ ಮನಸ್ಸಿನ" ಅಗತ್ಯವಿದೆ.

ಬೈಬಲಿನ ಹೇಳಿಕೆಯಂತೆ, ನಂಬುವುದು ಮಾತ್ರ ವಿಶ್ವಾಸವಲ್ಲ, ಕಷ್ಟದ ಸಮಯದಲ್ಲಿ ಕೇವಲ ಆತನ ಮೇಲೆ ಬರವಸವಿಡುವದು ಅಲ್ಲಿ ಅದರಲ್ಲಿ ಮೂರು ಪ್ರಮುಖ ಅಂಶಗಳಿವೆ ಆದಾಗ್ಯೂ ಅವುಗಳನ್ನು ಪ್ರತ್ಯೇಕಮಾಡಲಾಗುವದಿಲ್ಲ, *ಜ್ಞಾನ, ಭರವಸೆ, ಮತ್ತು ಕ್ರಿಯೆ.*

ಈ ಮೂರು ಅಂಶಗಳನ್ನು ಇಬ್ರಿಯ 11:6ರಲ್ಲಿ ನೋಡುತ್ತೇವೆ. ದೇವರನ್ನು ಮೆಚ್ಚಿಸುವಸಲುವಾಗಿ, ಕ್ರೈಸ್ತರು ಜ್ಞಾನವನ್ನು ಪಡೆಯಬೇಕು, ಆತನ ಅಭಿಲಾಷೆಯನ್ನು ಈಡೇರಿಸುವ ಒತ್ತಾಸೆಯನ್ನು ಹೊಂದಿರಬೇಕು, ಮತ್ತು ಅಜ್ಞಾನದ ಉಗಮವನ್ನು ತಿಳಿಯಬೇಕು (ಧರ್ಮೋಪದೇಶಕಾಂಡ 10:12, 13 ನೋಡಿ). ದೇವರಿಂದ ಬಹುಮಾನವನ್ನು ಪಡೆಯಲು, ಭರವಸದಿಂದಲೂ, ಜ್ಞಾನದಿಂದಲೂ ಕ್ರಿಯೆಯನ್ನು ಮಾಡಬೇಕು, ಜ್ಞಾನ, ಭರವಸೆ, ಮತ್ತು ಕ್ರಿಯೆ, ಈ ಮೂರು ಅಂಶಗಳು ದೇವರನ್ನು ಮೆಚ್ಚಿಸುವ ನಂಬಿಕೆಯಾಗಿರುತ್ತದೆ.

ನಂಬಿಕೆಯ ಸ್ವಭಾವದ ಕುರಿತಾಗಿ ಯಾಕೋಬ 2ರಲ್ಲಿ ತಿಳಿಯುತ್ತೇವೆ. ವಚನ 14ರಲ್ಲಿ, "ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು?" ಅಂಥ ನಂಬಿಕೆಯು ಇವನನ್ನು ರಕ್ಷಿಸವುದೋ? ಯಾಕೋಬನು ಮುಂದುವರಿದು, ಕ್ರಿಯೆಗಳೊಂದಿಗೆ ಅಗತ್ಯವಿರುವ ನಂಬಿಕೆಯ ಕುರಿತಾಗಿ ಜ್ಞಾನ ಮತ್ತು ಭರವಸೆಯ ಕುರಿತಾಗಿಯೂ ತಿಳಿಸುತ್ತಾನೆ. ದೇವರು ಇರುವನು ಎಂಬ ಜ್ಞಾನವನ್ನು ನಂಬಿಕೆಯಲ್ಲಿ ಹೊಂದಿರಬೇಕೆಂದು ತಿಳಿಸುತ್ತಾನೆ. "ದೇವರು ಒಬ್ಬನೆ ಎಂದು ನೀನು ನಂಬುವವನು. ಹಾಗೆ ನಂಬುವುದು ಒಳ್ಳೇದು, ದೆವ್ವಗಳು ಕೂಡ ಹಾಗೆ

ನಂಬಿ ಹೆದರುತ್ತವೆ" (ವಚನ 19); "ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂಬ ಶಾಸ್ತ್ರದ ಮಾತು ನೆರವೇರಿತು ಮತ್ತು ದೇವರ ಸ್ನೇಹಿತನೆಂದು ಹೆಸರು ಅವನಿಗುಂಟಾಯಿತು" (ವಚನ 23). ಭರವಸೆಯು, ನಂಬಿಕೆಗೆ ಒಂದು ಭಾಗವಾಗಿದೆ. ಎಂದು ಯಾಕೋಬನು ತಿಳಿಸಿದನು, ದೇವರು ಹೇಳಿದ್ದನ್ನೆ ಅಬ್ರಹಾಮನು ಮಾಡಿದನು. "ನಮ್ಮ ಪಿತೃವಾದ ಅಬ್ರಹಾಮನು ಇಸಾಕನೆಂಬ ತನ್ನ ಮಗನನ್ನು ಯಜ್ಞವೇದಿಯ ಮೇಲೆ ಅರ್ಪಿಸಿದಾಗ ನೀತಿವಂತನೆಂಬ ನಿರ್ಣಯವನ್ನು ಹೊಂದಿದ್ದು ಕ್ರಿಯೆಗಳಿಂದಲೆ?" (ವಚನ 21), ಜ್ಞಾನ ಭರವಸೆ ಮತ್ತು ಕ್ರಿಯೆ: ಇವೆಲ್ಲವೂ ಅಬ್ರಹಾಮನಲ್ಲಿ ಇದ್ದವು ಎಂದು ಯಾಕೋಬನು ತಿಳಿಸುತ್ತಾನೆ.

ಪೌಲನ ನಂಬಿಕೆಯಲ್ಲಿಯೂ, ಜ್ಞಾನ, ಭರವಸೆ, ಮತ್ತು ಕ್ರಿಯೆಯನ್ನು ನೋಡುತ್ತೇವೆ. ಅವನು ಹಿಂಸೆಯನ್ನು ಸಹಿಸಿಕೊಂಡ ವಿಷಯದಲ್ಲಿ, ತಿಮೋಥೆಯನಿಗೆ ಬರೆದು ಇದರ ನಿಮಿತ್ತದಿಂದಲೇ ಈ ಶ್ರಮಗಳನ್ನು ಅನುಭವಿಸುತ್ತಾ ಇದ್ದೇನೆ; "ಆದರೂ ನಾನು ನಾಚಿಕೆ ಪಡುವದಿಲ್ಲ ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿರುವದನ್ನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ" (2 ತಿಮೊಥೆ 1:12). ಪೌಲನು ಯೇಸುವನ್ನು ನಂಬಿದ್ದರಿಂದ ಅವಮಾನವನ್ನು ಸಹಿಸಿಕೊಂಡನು ಹಿಂಸೆಯ ನಂತರ ಪ್ರತಿಫಲವನ್ನು ಹೊಂದುವೆನು ಎಂಬ ದೃಢವಿಶ್ವಾಸವನ್ನು ಹೊಂದಿದ್ದನು (2 ತಿಮೊಥೆ 4:6-8). ಅಂತ ಒಂದು ಭರವಸೆಯನ್ನು ಹೇಗೆ ಹೊಂದಿದನು? ಅವನು ರಕ್ಷಕನ ಗುಣವನ್ನು ಅರಿತವನಾಗಿದ್ದದರಿಂದಲೇ ಯೇಸುವಿನಲ್ಲಿ ಅವನು ಹೊಂದಿದ್ದಂಥ ದೃಢ ವಿಶ್ವಾಸವು ಅವನನ್ನು ಸಕಲ ಸಂದರ್ಭದಲ್ಲೂ ಕರ್ತನನ್ನೆ ಆಶ್ರಯಿಸಿಕೊಳ್ಳುವಂತೆ ಮಾಡಿತ್ತು. ಆ ಭರವಸವು ನಂಬಿಕೆಯಿಂದ ಕ್ರಿಯೆಯನ್ನು ಮಾಡಲು ಸಹಕಾರವಾಯಿತು ಆದುದರಿಂದ ಹಿಂಸೆಯನ್ನು ತಾಳಿಕೊಂಡನು.

ಯಥಾರ್ಥವಾದ ವಿಶ್ವಾಸಕ್ಕೆ, ಜ್ಞಾನ ಭರವಸೆ ಮತ್ತು ಕ್ರಿಯೆಗಳು ಅಗತ್ಯವಿರುವದರಿಂದ, ನಾವು ನಂಬುವದು, ಮತ್ತು ಮಾಡುವ ಕ್ರಿಯೆಗಳು ಪ್ರಾಮುಖ್ಯವಾಗಿರುತ್ತದೆ. ದೇವರ ಸ್ವಭಾವವನ್ನು ನಾವು ಅರಿಯದಿದ್ದರೆ, ಆತನ ಕಾರ್ಯಗಳನ್ನು ಮಾಡುವದಕ್ಕೂ ಅಥವಾ ಆತನ ಮೇಲೆ ಭರವಸವಿಡುವದಕ್ಕೂ ಮತ್ತು ಆತನ ಆಜ್ಞೆಗಳನ್ನು ಪಾಲಿಸುವದಕ್ಕೂ ಅಸಾಧ್ಯವಾಗುತ್ತದೆ. ಹೇಗೂ ನಾವು ಆತನ ಕಾರ್ಯಗಳನ್ನು ದೇವರ ಸ್ವಭಾವದ ತಿಳುವಳಿಕೆಯನ್ನು ಅರಿಯದೆ ಮಾಡಲು ಸಾಧ್ಯವಿಲ್ಲ. ಆದುದರಿಂದ ಪೌಲನು ತಿಮೊಥಿಗೆ ಬರೆದ ಮಾತುಗಳಲ್ಲಿ ಆಶ್ಚರ್ಯ ಉಂಟುಮಾಡುತ್ತದೆ.

> ನೀನು ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯೂ ಪ್ರೀತಿಯೂ ಉಳ್ಳವನಾಗಿ ನನ್ನಿಂದ ಕೇಳಿದ ಸ್ವಸ್ಥಬೋಧನಾವಾಕ್ಯಗಳನ್ನು ಮಾದರಿಮಾಡಿಕೊಂಡು ಅನುಸರಿಸು. ನಿನ್ನ ವಶಕ್ಕೆ ಕೊಡಲ್ಪಟ್ಟಿರುವದನ್ನು ಶ್ರೇಷ್ಠವೆಂದು ತಿಳಿದು ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮೂಲಕ ಕಾಪಾಡು (2 ತಿಮೊಥಿ 1:13, 14).

ರೋಮಾಪುರದವರು ಕರ್ತನಿಗೆ ನಂಬಿಗಸ್ತರಾಗಿದ್ದರು ಎಂದು ತಿಳಿಸಿ, "ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕಾಗಿ ಅಧೀನರಾದದರಿಂದಲೂ" (ರೋಮಾಪುರ 6:17ಬಿ). ಕರ್ತನು ಯಾರು ಎಂಬುದನ್ನು ಅರಿಯುವ ಮೂಲಕ, ಮತ್ತು ದೇವರು ನಮ್ಮಿಂದ ಏನನ್ನು ಬಯಸುತ್ತಾನೆ. ಎಂದು ತಿಳಿಯುವ ಮೂಲಕವಾಗಿ ನಂಬಿಕೆಯು ನಮ್ಮನ್ನು ವಿದೇಯತೆಯ ಭರವಸಕ್ಕೆ ಮುನ್ನಡೆಸುತ್ತದೆ.

## ಮುಕ್ತಾಯ

ನಾವು "ಕ್ರಿಸ್ತನ ಮನಸ್ಸನ್ನು" ಅರಿಯುವ ಮೂಲಕ, ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು

ಪರಿಹರಿಸಿಕೊಳ್ಳಬಹುದು. ಹೊಸ ಒಡಂಬಡಿಕೆಯ ಬರಹಗಳಲ್ಲಿ "ಕ್ರಿಸ್ತನ ಮನಸ್ಸನ್ನು" ಕುರಿತು ತಿಳಿಯಬಹುದು. ರೋಮಾಪುರ 10:17ರಲ್ಲಿ ತಿಳಿಸಿ, "ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" ನಾವು ಕ್ರಿಸ್ತನನ್ನು ಹಿಂಬಾಲಿಸುವ ಮೂಲಕ ಕ್ರಿಸ್ತನಿಗೆ ಒಳಪಡುತ್ತೇವೆ, ಮತ್ತು ದೇವರ ಮಾತುಗಳಿಗೆ ಗೌರವವನ್ನು ನೀಡುತ್ತೇವೆ, ಅದನ್ನು ಕಲಿತು, ಆತನನ್ನು ಹಿಂಬಾಲಿಸುವದರಲ್ಲಿ, ಆತನ ಬೋಧನೆಯನ್ನು ಅರಿಯುತ್ತೇವೆ - ಅದು ನಮ್ಮನ್ನು ನಡಿಸುತ್ತದೆ.

ಕ್ರೈಸ್ತರು ಬೆಳವಣಿಗೆಯನ್ನು ಹೊಂದಲೇಬೇಕು. ದೇವರು ಮಾಡು ಎಂದಿರುವದನ್ನು ಅಥವಾ ಮಾಡದೆ ಇರು ಎಂಬುದನ್ನು ನೆರವೇರಿಸಲು ಇದು ಸರಿಯಾದ ಸಮಯ ವಾಗಿದೆ. ಆತನ ಮನಸ್ಸನ್ನು ಪಡೆಯಲು ಪ್ರಯತ್ನಿಸೋಣ ಮತ್ತು ನಮ್ಮ ತಿಳುವಳಿಕೆಯು ಬೆಳೆಯುತ್ತದೆ. ಇತರರು ಆತನ ಮನಸ್ಸನ್ನು ಪಡೆಯಲು, ನಾವು ಅವರಿಗೆ ಸಹಾಯಿಸಿ ಅವರೊಂದಿಗೆ ಸಮೀಪಸ್ಥರಾಗೋಣ. ಮತ್ತು ಈ ರೀತಿಯಾಗಿ ಪೌಲನ ಹೇಳಿಕೆಯಂತೆ, "ನಾವು ಒಂದೇ ಮನಸ್ಸು ಒಂದೇ ಅಭಿಪ್ರಾಯವೂ ಉಳ್ಳವರಾಗಿರೋಣ" (1 ಕೊರಿಂಥ 1:10ಬಿ) ದೇವರ ಹೇಳಿಕೆಗಳಿಗೆ ಹೆಚ್ಚು ಗಮನ ಹರಿಸೋಣ.